
ನೂರ್ಮಾಳ ಹುಡುಕಲು ಹೊರಡುತ್ತೇನೆ
ಆಕೆಯನೇ ಆವಾಹಿಸಿ
ದಿಂಬಿನ ಬೆಚ್ಚನೆ ಮೂಲೆ – ಸೋಫಾ ಕೆಳಗಿನ ಗೂಡು
ಒಲೆ ತಣಿದ ಬೂದಿ – ಕಪಾಟಿನ ಕತ್ತಲ ಖಾನೆ...
ಊಹೂಂ, ಈ ಬಾರಿ ಮಾತ್ರ
ಎಲ್ಲಿಯೂ ಇಲ್ಲ ಅವಳು

ಹೊತ್ತು ಹೊತ್ತಿಗೆ ಹಾಲುಣಿಸುತ್ತಿದ್ದ ನನ್ನನೂ
ಕ್ಯಾರೇ ಅನ್ನದ ಅವಳ ಠೀವಿ ಹೊತ್ತು
ಬೀದಿಯೆಡೆಗೆ ಮುಖ ಮಾಡುತ್ತೇನೆ

ರಸ್ತೆಯಲೂ ಮಾಯವಾಗಿದೆ ಪ್ರಾಣಿ ಪ್ರಪಂಚ
ಇಷ್ಟ ಬಂದಾಗ ಬೊಗಳುವ ಬೀದಿ ನಾಯಿಗಳಿಲ್ಲ
ಸರೀ ಹೊತ್ತಿನಲಿ ರಸ್ತೆ ದಾಟುವ
ಕಪ್ಪು ಬೆಕ್ಕುಗಳಿಲ್ಲ
ಬಾಲವ ಗೋಲ ಗೋಲಕೆ ತಿರುಗಿಸಿ
ಬೇಕಾದಲ್ಲಿ ಸೆಗಣಿ ಹಾಕುವ ರಾಜ ಹೋರಿಗಳಿಲ್ಲ



ಕವಿಗಳು ಕೈ ಬದಲಿಸಿಕೊಂಡು ರೂಪಕವನ್ನು ಕಟ್ಟುವ ಆಟ **ಕಾವ್ಯ ಜೂಟಾಟ.** ಕಳೆದ ಸಂಚಿಕೆಯಲ್ಲಿ, ರಾಯಚೂರಿನ ಆರಿಫ್ ರಾಜಾ ಅವರಿಂದ ಆರಂಭಗೊಂಡ ಈ ಆಟವನ್ನು ಪ್ರಸ್ತುತ ಅಮೆರಿಕದಲ್ಲಿರುವ ಕಾವ್ಯಾ ಕಡಮೆ ಮುಂದುವರೆಸಿದ್ದಾರೆ. ಜೀವಿಗಳ ಹುಡುಕಾಟದ ಸ್ವರೂಪ ಹಾಗೂ ಪಾತ್ರ ಮತ್ತಷ್ಟು ಸಂಕೀರ್ಣಗೊಂಡಿವೆ. ಈ ಹುಡುಕಾಟ ನಮ್ಮೊಳಗಿನ ಹೊರಗಿನ ಅನೇಕ ಮಸುಕು ಬಿಂಬಗಳ ದೂಳು ಒರೆಸುವಂತಿದೆ